ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಜಂ.ನಿ.(ಆ)ಆ.ಶಾಖೆ:ಮ.ಆ.ನೋಂ01/2016-17 ದಿನಾಂಕ:26/10/2016

## ಸುತ್ತೋಲೆ

**ವಿಷಯ:** 2016-17ನೇಸಾಲಿನಲ್ಲಿ 1ರಿಂದ10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ, ಅನುದಾನ ಹಾಗೂ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳಿಗೆ ಆಧಾರ್ ನೋಂದಣಿ ಮಾಡಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ:20/10/2016

---

ಈ ಕಛೇರಿಯ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವ ಪ್ರಕಾರ ದಿನಾಂಕ 24/10/2016 ಹಾಗೂ 25/10/2016 ರಂದು ಆಧಾರ್ ನೋಂದಣಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾವಾರು ಮಾಹಿತಿಯನ್ನು ಬೆಂಗಳೂರು ಆಯುಕ್ತಾಲಯಕ್ಕೆ ಸಲ್ಲಿಸಿರುತ್ತೀರಿ,

ಆದರೆ, ಕೆಲವೊಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ವ್ಯಾಪ್ತಿಗೆ ಬರುವ ತಾಲ್ಲೂಕುಗಳಿಂದ ಅನುಬಂಧ-1 ರಲ್ಲಿ ಪ್ರತಿ ಶಾಲೆಯ ಶಾಲಾ ಮುಖ್ಯೋಪಾಧ್ಯಾಯರ ಸಹಿಯೊಂದಿಗೆ ಇರುವ ಮಾಹಿತಿಯನ್ನು ಸಲ್ಲಿಸದೇ ಇರುವುದನ್ನು ಗಮನಿಸಲಾಗಿದೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಕಛೇರಿಗೆ ಸಲ್ಲಿಸಿರುವ ಕ್ಷೇತ್ರದ ಕ್ರೋಢೀಕೃತ ಮಾಹಿತಿಯಲ್ಲಿ ಶಿಕ್ಷಕರ ಆಧಾರ್ ಸಂಖ್ಯೆ ಹಾಗೂ ಪ್ರತಿ ತಾಲ್ಲೂಕಿಗೆ DISE ಮಾಹಿತಿಯಂತೆ ಇರುವ ಶಾಲೆಗಳಿಗೆ ಹೊಂದಾಣಿಕೆ ಇಲ್ಲದಿರುವುದು ಸಹ ಗಮನಿಸಲಾಗಿದೆ. ಆದ್ದರಿಂದ, ಮಾಹಿತಿಯು ಅಪೂರ್ಣವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರತಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಮ್ಮ ನಿಮ್ಮ ವ್ಯಾಪ್ತಿಗೆ ಬರುವ ಶಾಲೆಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ಶಾಲಾವಾರು ಸಿದ್ಧಪಡಿಸಿ, ದಿನಾಂಕ 28/10/2016 ರೊಳಗೆ ಬೆಂಗಳೂರು ಆಯುಕ್ತಾಲಯಕ್ಕೆ ಮುದ್ದಾಂ ಸಲ್ಲಿಸುವ ಜೊತೆಗೆ ಮೊದಲು ಕ್ಷೇತ್ರದ ಕ್ರೋಢೀಕೃತ ಶಾಲಾವಾರು ಮಾಹಿತಿಯನ್ನು ಇ-ಮೇಲ್ ವಿಳಾಸಕ್ಕೆ cpiddstat@gmail.com ತಪ್ಪದೆ ಕಳುಹಿಸಲು ತಿಳಿಸಿದೆ. ನಿಗದಿತ ದಿನಾಂಕದೊಳಗೆ ಮಾಹಿತಿ ಬಾರದೇ ಹೋದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ಆಯುಕ್ತರ ಆದೇಶದ ಮೇರೆಗೆ }

ನೋಡಲ್ ಅಧಿಕಾರಿಗಳು ಹಾಗೂ
ಉಪ ನಿರ್ದೇಶಕರು(ಅಂಕಿ-ಅಂಶ)
ಸಾರ್ವಜನಿಕ ಶಿಕ್ಷಣ ಇಲಾಖೆ

**ಪ್ರತಿಯನ್ನು:**

*01.* ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
*02.* ಅಪರ ಆಯುಕ್ತರು, ಧಾರವಾಡ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*03.* ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*04.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*05.* ರಾಜ್ಯದ ಎಲ್ಲಾ ನೋಡಲ್ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*06.* ಕಛೇರಿ ಪ್ರತಿ.